**ಹೆಚ್ಚುವರಿ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ**

**ಸಿಸಿ ನಂ. 396/2016**

| | | | |
|---|---|---|---|
| ಹೆಸರು | : | ಡಾ. ಶಿವನಾಗಪ್ಪ ಪಾಟೀಲ್ | ಚಾ.ಸಾ. 7 |
| ತಂದೆಯ ಹೆಸರು | : | ರಾಮಶೆಟ್ಟಿ | ಪ್ರಾ.ಸಾ. 2 |
| ವಯಸ್ಸು | : | 55 ವರ್ಷ | ದಿನಾಂಕಃ 05-03-2024 |
| ಉದ್ಯೋಗ | : | ಹಿರಿಯ ವೈದ್ಯಧಿಕಾರಿ | |
| ವಾಸಸ್ಥಳ | : | ನರೋಣ | |

ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ**

.ದಿನಾಂಕಃ 13-04-2016 ರಂದು ಮದ್ಯಾಹ್ನ 3-00 ಗಂಟೆಗೆ ಚಾಸಾ-6 ನಮ್ಮ ಆಸ್ಪತ್ರೆಗೆ ಬಂದಿದ್ದು ಅವರಿಗೆ ತಪಾಸಣೆ ಮಾಡಿ ನೋಡಿದಾಗ ಅವರ ತಲೆಗೆ, ಬೆನ್ನಿಗೆ ಹಾಗೂ ಎರಡು ಕಾಲುಗಳಿಗೆ ಗುಪ್ತ ಗಾಯಗಳು ಕಂಡುಬಂದಿರುತ್ತದೆ. ಆದ್ದರಿಂದ ಹೆಚ್ಚಿನ ಚಿಕಿತ್ಸೆಗಾಗಿ ಅವರಿಗೆ ಗುಲ್ಬರ್ಗಾ ಸರಕಾರಿ ಆಸ್ಪತ್ರೆಗೆ ಕಳುಹಿಸಿರುತ್ತೇನೆ. ಗುಲ್ಬರ್ಗಾ ಸರಕಾರಿ ಆಸ್ಪತ್ರೆಯಿಂದ ಎಕ್ಸರೆ ವರದಿ ಬಂದಿದ್ದು ಅದರಲ್ಲಿ ಯಾವುದೇ ಕೊರತೆ ಕಂಡುಬಂದಿರುವುದಿಲ್ಲ.

ಈಗ ನೋಡುತ್ತಿರುವ ಗಾಯದ ಪ್ರಮಾಣ ಪತ್ರ ಈಗ ನೋಡುತ್ತಿದ್ದು, ಸದರಿ ಗಾಯದ ಪ್ರಮಾಣ ಪತ್ರ ನನ್ನದೆ. ಸದರಿ ಪ್ರಮಾಣ ಪತ್ರವನ್ನು ಈಗ ನೋಡುತ್ತಿದ್ದು ಅದನ್ನೀಗ ನಿಪಿ-2 ಎಂದು ಹಾಗೂ ಅದರಲ್ಲಿರುವ ನನ್ನ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ನಿಪಿ-2 ರಲ್ಲಿರುವ ಗಾಯ ಸಾಮಾನ್ಯವಾಗಿ ಚೂಪು ಇಲ್ಲದೆ ಇರುವ ವಸ್ತುವಿನಿಂದ ಹೊಡೆದಾಗ ಆಗಬಹುದು.

**ಪಾಟೀ ಸವಾಲುಃ ಆರೋಪಿತರ ಪರವಾಗಿ ಶ್ರೀ ಎನ್.ಹೆಚ್.ಆರ್. ವಕೀಲರಿಂದಃ-**

ಚಾಸಾ-6 ರವರ ಜೊತೆ ಯಾರು ಬಂದಿದ್ದರು ಎಂದು ಪ್ರಶ್ನಿಸಿದಾಗ ಸಾಕ್ಷಿ ಅವರ ಜೊತೆ ಬೇರೆಯವರು ಬಂದಿದ್ದರು ಆದರೆ ಅವರು ನನಗೆ ನಾನು ಒಬ್ಬಳೇ ಬಂದಿದ್ದೇನೆ ಎಂದು ಹೇಳಿದ್ದಾರೆ ಎಂದು ನುಡಿಯುತ್ತಾರೆ. ಮದ್ಯಾಹ್ನ 3-00 ಗಂಟೆಗೆ ನಾನು ಚಾಸಾ-6 ರವರಿಗೆ ತಪಾಸಣೆ ಮಾಡಲು ಪ್ರಾರಂಭಿಸಿದ್ದು ಮದ್ಯಾಹ್ನ 3-30 ಗಂಟೆಗೆ ಸರಕಾರಿ ಆಸ್ಪತ್ರೆ ಗುಲ್ಬರ್ಗಾಕ್ಕೆ ಕಳಹಿಸಿಕೊಟ್ಟಿದ್ದೆ. ಈ ರೀತಿ ನಾನು ನಿಪಿ-2 ರಲ್ಲಿ ಉಲ್ಲೇಖ ಮಾಡಿಲ್ಲ ಎಂದರೆ ಸರಿ. ಸದರಿ ಗಾಯಗಳ ವಯಸ್ಸು 0-48 ಗಂಟೆ

ಆಗಿದೆ. ಚಾಸಾ-6 ರವರು ಪೋಲಿಸರ ಮುಖಾಂತರ ಬಂದಿರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಪೋಲಿಸರಿಗೆ ನಾನು ಮಾಹಿತಿ ನೀಡಿದ್ದೇನೆ ಎನ್ನುತ್ತಾರೆ. ನಿಪಿ-2 ರಲ್ಲಿ ಗುರುತಿನ ಚಿನ್ಹೆ ಉಲ್ಲೇಖವಿರುವುದಿಲ್ಲ ಎಂದರೆ ಸರಿ. ಸಾಮಾನ್ಯವಾಗಿ ಒಬ್ಬ ವ್ಯಕ್ತಿ ಕಾಲು ಜಾರಿ ಬಿದ್ದಾಗ ನಿಪಿ-2 ರಲ್ಲಿರುವ ಗಾಯಗಳು ಆಗಬಹುದು ಎಂದರೆ ಸಾಕ್ಷಿ ಒಂದೇ ಬಾರಿ ಬಿದ್ದಾಗ ಆಗಲು ಸಾಧ್ಯವಿಲ್ಲ ಎಂದು ನುಡಿಯುತ್ತಾರೆ. ಸಾಮಾನ್ಯವಾಗಿ ಒಬ್ಬ ವ್ಯಕ್ತಿ ಇಳಿಜಾರು ಪ್ರದೇಶದಲ್ಲಿ ಬಿದ್ದಾಗ ನಿಪಿ-2 ರಲ್ಲಿರುವ ಗಾಯಗಳು ಆಗಬಹುದು ಎಂದರೆ ಸರಿಯಲ್ಲ.

ನಿಪಿ-2 ರಲ್ಲಿ ಗಾಯದ ಬಣ್ಣಗಳು ಉಲ್ಲೇಖ ಮಾಡಿಲ್ಲ ಎಂದರೆ ಸರಿ. ಪೋಲಿಸರ ಮಾತು ಕೇಳಿ ಸುಳ್ಳು ವರದಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲಾ.**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಹೆಚ್ಚುವರಿ ಪ್ರ.ದ.ನ್ಯಾ.ದಂ. ಚಿಂಚೋಳಿ**